# ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 610
2. ಮಾನ್ಯ ಸದಸ್ಯರ ಹೆಸರು : ಶ್ರೀ ಬಿ.ಕೆ. ಹರಿಪ್ರಸಾದ್ (ವಿಧಾನ ಸಭೆಯಿಂದ ಚುನಾಯಿತರಾದವರು)
3. ಉತ್ತರಿಸಬೇಕಾದ ದಿನಾಂಕ : 14/12/2020
4. ಉತ್ತರಿಸುವವರು : ಮಾನ್ಯ ಕಾರ್ಮಿಕ ಮತ್ತು ಸಕ್ಕರೆ ಸಚಿವರು

| ಕ್ರಮ ಸಂಖ್ಯೆ | ಪ್ರಶ್ನೆ | ಉತ್ತರ |
|---|---|---|
| ಅ) | ಕೋವಿಡ್ ಹಿನ್ನಲೆಯಲ್ಲಿ ರಾಜ್ಯ ಸರ್ಕಾರವು ಆಟೋ ಮತ್ತು ಟ್ಯಾಕ್ಸಿ ಚಾಲಕರು, ಕ್ಷೌರಿಕರು, ಮಡಿವಾಳರು ಹಾಗೂ ಇತರೆಯವರಿಗೆ ಘೋಷಿಸಿರುವ ಆರ್ಥಿಕ ನೆರವಿನ ಪ್ಯಾಕೇಜ್‌ನ್ನು ಎಷ್ಟು ಫಲಾನುಭವಿಗಳಿಗೆ ವಿತರಿಸಲಾಗಿದೆ; ಮತ್ತು ಇದಕ್ಕಾಗಿ ಅನುಸರಿಸಲಾದ ಮಾನದಂಡಗಳೇನು; (ಜಿಲ್ಲಾವಾರು ಮಾಹಿತಿ ನೀಡುವುದು) | **<u>ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿ:-</u>**<br>ಕೋವಿಡ್-19 ಹಿನ್ನಲೆಯಲ್ಲಿ, ರಾಜ್ಯ ಸರ್ಕಾರವು ಆಟೋ ಮತ್ತು ಟ್ಯಾಕ್ಸಿ ಚಾಲಕರು, ಕ್ಷೌರಿಕರು, ಮಡಿವಾಳರು ಹಾಗೂ ಇತರೆಯವರಿಗೆ ಘೋಷಿಸಿರುವ ಆರ್ಥಿಕ ನೆರವಿನ ಪ್ಯಾಕೇಜ್‌ಗಳಲ್ಲಿ ಅಗಸರು ಮತ್ತು ಕ್ಷೌರಿಕ ವೃತ್ತಿಯಲ್ಲಿ ತೊಡಗಿರುವ ಅಸಂಘಟಿತ ಕಾರ್ಮಿಕರಿಗೆ ತಲಾ ರೂ. 5,000/-ಗಳ ಒಂದು ಬಾರಿಯ **ನೆರವಿನ ವಿಶೇಷ ಪ್ಯಾಕೇಜ್‌ನ್ನು**, ಈ ಮಂಡಳಿಯ ಮೂಲಕ ಜಾರಿಗೊಳಿಸಲಾಗುತ್ತಿದೆ.<br>ಸದರಿ ವಿಶೇಷ ಪ್ಯಾಕೇಜ್ ಅಡಿಯಲ್ಲಿ ನಿಗದಿಪಡಿಸಿದ ಅಂತಿಮ ದಿನಾಂಕ: 15-08-2020ರ ರವರೆಗೆ ಅಗಸ ವೃತ್ತಿಯಲ್ಲಿ ತೊಡಗಿರುವ 74782 ಹಾಗೂ ಕ್ಷೌರಿಕ ವೃತ್ತಿಯಲ್ಲಿ ತೊಡಗಿರುವ 66820 ಕಾರ್ಮಿಕರು ಸೇರಿದಂತೆ, ಒಟ್ಟು 1,41,602 ಅರ್ಜಿಗಳು ಸ್ವೀಕೃತಗೊಂಡಿರುತ್ತವೆ. ಅವರಲ್ಲಿ ಈವರೆಗೆ ಅಗಸ ವೃತ್ತಿಯಲ್ಲಿ ತೊಡಗಿರುವ 64176 ಹಾಗೂ ಕ್ಷೌರಿಕ ವೃತ್ತಿಯಲ್ಲಿ ತೊಡಗಿರುವ 55466 ಕಾರ್ಮಿಕರು ಸೇರಿದಂತೆ ಒಟ್ಟು 1,19,642 ಅರ್ಜಿದಾರರಿಗೆ ತಲಾ ರೂ.5,000/- ದಂತೆ ಒಟ್ಟು ರೂ.59.82 ಕೋಟಿಗಳ ನೆರವನ್ನು ವಿತರಿಸಲಾಗಿದೆ. (ಜಿಲ್ಲಾವಾರು ಮಾಹಿತಿಯನ್ನು **<u>ಅನುಬಂಧ-1ರಲ್ಲಿ</u>** ಒದಗಿಸಿದೆ).<br>**ಪರಿಹಾರ ವಿತರಿಸಲು ಮಾನದಂಡಗಳು:**<br>➢ ಕರ್ನಾಟಕದಲ್ಲಿ ನೆಲೆಸಿರುವ ಅಗಸ ಮತ್ತು ಕ್ಷೌರಿಕರು ಹಾಗು ಅಗಸ/ಕ್ಷೌರಿಕ ವೃತ್ತಿ ನಿರ್ವಹಿಸುತ್ತಿರುವ ಬೇರೆ ರಾಜ್ಯದ ಕಾರ್ಮಿಕರು ಸಹ ಪರಿಹಾರವನ್ನು ಪಡೆಯಲು ಅರ್ಹರು.<br>➢ ಒಂದು ಕುಟುಂಬದಲ್ಲಿ ಒಂದಕ್ಕಿಂತ ಹೆಚ್ಚು ಮಂದಿ ವೃತ್ತಿಯಲ್ಲಿ ತೊಡಗಿದ್ದಲ್ಲಿ, ಈ ಪೈಕಿ ಒಬ್ಬರು ಮಾತ್ರ |

| | | |
|---|---|---|
| | | ಪರಿಹಾರ ಧನವನ್ನು ಪಡೆಯಲು ಅರ್ಹರು.<br>➢ ಫಲಾನುಭವಿಗಳು ಸಲ್ಲಿಸುವ ಎಲ್ಲಾ ಅರ್ಜಿಗಳು ಸೇವಾ ಸಿಂಧು ಪೋರ್ಟಲ್ ಮೂಲಕವೇ ಸ್ವೀಕೃತವಾಗತಕ್ಕದ್ದು ಹಾಗೂ ಅದನ್ನು ಸೇವಾ ಸಿಂಧು ಪೋರ್ಟಲ್ ಮೂಲಕವೇ ಅನುಮೋದನೆ ಮಾಡತಕ್ಕದ್ದು<br>➢ ಫಲಾನುಭವಿಗಳಿಗೆ ಪರಿಹಾರ ಧನವನ್ನು ಕಡ್ಡಾಯವಾಗಿ ಆಧಾರ್ ಆಧಾರಿತ ಡಿ.ಬಿ.ಟಿ (ಡೈರೆಕ್ಟ್ ಬೆನಿಫಿಟ್ ಟ್ರಾನ್ಸ್‌ಫರ್) ಮೂಲಕವೇ ವರ್ಗಾಯಿಸುವುದು.<br>➢ ಅರ್ಜಿದಾರರು 18 ರಿಂದ 65 ವರ್ಷಗಳ ವಯೋಮಿತಿಯವರಾಗಿರಬೇಕು.<br>➢ ಈ ಯೋಜನೆಯ ಸೌಲಭ್ಯವನ್ನು ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳಿಗೆ ಮಾತ್ರ ಸೀಮಿತಗೊಳಿಸಲಾಗಿದೆ.<br>➢ ಪರವಾನಿಗೆಯನ್ನು ಪಡೆದಿರುವ ಸಂಸ್ಥೆಯಲ್ಲಿ 4 (ನಾಲ್ಕು) ಕ್ಕಿಂತ ಹೆಚ್ಚು ಕಾರ್ಮಿಕರ ಕೆಲಸ ನಿರ್ವಹಿಸುತ್ತಿದ್ದು, ಅವರು ಅರ್ಜಿ ಸಲ್ಲಿಸಿದ್ದಲ್ಲಿ, ಕಡ್ಡಾಯವಾಗಿ ತಪಾಸಣೆಯನ್ನು ಕೈಗೊಳ್ಳುವುದು. ಹಾಗೂ ಪರವಾನಿಗೆಯನ್ನು ಪಡೆಯದೇ ಕಾರ್ಯ ನಿರ್ವಹಿಸುತ್ತಿರುವ ಸಂಸ್ಥೆಯಿಂದ 2 (ಎರಡು) ಕ್ಕಿಂತ ಹೆಚ್ಚು ಫಲಾನುಭವಿಗಳು ಅರ್ಜಿ ಸಲ್ಲಿಸಿದಲ್ಲಿ ತಪಾಸಣೆ ಕಡ್ಡಾಯವಾಗಿರುತ್ತದೆ.<br><br>**ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ:-**<br><br>ಕೋವಿಡ್-19 ಸಂದರ್ಭದಲ್ಲಿ ನೋಂದಾಯಿತ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರಿಗೆ ವಿಶೇಷ ಪರಿಹಾರ ಧನವನ್ನು ರಾಜ್ಯ ಸರ್ಕಾರವು ಘೋಷಿಸಿದ್ದು, ಸರ್ಕಾರದ ಆದೇಶದಂತೆ ರೂ.5000/- ಗಳ ಒಂದು ಬಾರಿ ಕೋವಿಡ-19 ಧನ ಸಹಾಯವನ್ನು ಒಟ್ಟು 16,48,431 ಕಾರ್ಮಿಕರಿಗೆ ರೂ.824.21,55,000/- ಪರಿಹಾರ ಧನವಾಗಿ ಈ ಮಂಡಳಿಯು ವಿತರಿಸಿರುತ್ತದೆ.<br>ಸದರಿ ಕೋವಿಡ್-19 ಒಂದು ಬಾರಿ ಪರಿಹಾರ ಧನವನ್ನು ಮಂಡಳಿಯಲ್ಲಿ ದಿನಾಂಕ: 23-03-2020ರ ಪೂರ್ವದಲ್ಲಿ ಆದ ನೋಂದಣಿಯ ಮಾನದಂಡದ ಆಧಾರದ ಮೇಲೆ ನೋಂದಾಯಿತ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕ ಫಲಾನುಭವಿಗಳಿಗೆ ವಿತರಿಸಲಾಗಿರುತ್ತದೆ.<br>ಜಿಲ್ಲಾವಾರು ವಿವರವನ್ನು **ಅನುಬಂಧ-2ರಲ್ಲಿ** ಒದಗಿಸಿದೆ. |

| | | |
|---|---|---|
| ಆ) | ಅರ್ಹರಿಗೆ ಈ ಪ್ಯಾಕೇಜ್‌ಗಳು ತಲುಪದಿರುವ ಬಗ್ಗೆ ದೂರುಗಳು ಬಂದಿದೆಯೇ; ಬಂದಿದ್ದಲ್ಲಿ, ಈ ಸಂಬಂಧ ಸರ್ಕಾರ ಕೈಗೊಂಡ ಕ್ರಮಗಳೇನು ? | **<u>ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿ:-</u>**<br>ಈ ಮಂಡಳಿಗೆ ಈವರೆಗೆ ಯಾವುದೇ ಲಿಖಿತ ದೂರುಗಳು ಸ್ವೀಕೃತವಾಗಿರುವುದಿಲ್ಲ.<br>**<u>ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ:-</u>**<br>ಕೋವಿಡ್-19 ಒಂದು ಬಾರಿ ಪರಿಹಾರ ಧನವು ಕೆಲವು ಫಲಾನುಭವಿಗಳಿಗೆ ತಲಪದಿರುವುದು ಮಂಡಳಿಯ ಗಮನಕ್ಕೆ ಬಂದಿದ್ದು, ಸುಮಾರು 1,02,034 ಅರ್ಜಿಗಳು ಕಾರ್ಮಿಕ ಅಧಿಕಾರಿಗಳ ಕಛೇರಿಯಲ್ಲಿ ಬಾಕಿ ಇರುವುದಾಗಿ ಕಂಡು ಬಂದಿರುತ್ತದೆ. ಆದರೆ, ಈ ಸಂಬಂಧ ಮಾನ್ಯ ಘನ ನ್ಯಾಯಾಲಯದಲ್ಲಿ ರಿಟ್ ಪಿಟಿಷನ್ ಸಂಖ್ಯೆ 6742/2020 ವಿಚಾರಣೆ ನಡೆಯುತ್ತಿರುವುದರಿಂದ ಮಾನ್ಯ ಘನ ನ್ಯಾಯಾಲಯವು ನೀಡುವ ಆದೇಶದಂತೆ ಕ್ರಮ ಕೈಗೊಳ್ಳಲಾಗುವುದೆಂದು ದಿನಾಂಕ 30-09-2020ರ ಮಂಡಳಿಯ 30ನೇ ಸಭೆಯಲ್ಲಿ ತೀರ್ಮಾನಿಸಲಾಗಿರುತ್ತದೆ. |

**ಕಾಇ 421 ಎಲ್‌ಇಟಿ 2020**

*(ಅರಬೈಲ್ ಶಿವರಾಂ ಹೆಬ್ಬಾರ್)*
**ಕಾರ್ಮಿಕ ಮತ್ತು ಸಕ್ಕರೆ ಸಚಿವರು**

## ಅನುಬಂಧ-1

## ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿ

ಅಗಸ ಮತ್ತು ಕ್ಷೌರಿಕ ವೃತ್ತಿಯಲ್ಲಿ ತೊಡಗಿರುವ ಕಾರ್ಮಿಕರ ಒಂದು ಬಾರಿ ಸಹಾಯ ಧನ ಪಡೆದ ಫಲಾನುಭವಿಗಳ ಜಿಲ್ಲಾವಾರು ವಿವರ:

| ಕ್ರಸಂ. | ಜಿಲ್ಲೆಯ ಹೆಸರು | ಕ್ಷೌರಿಕ | ಅಗಸ | ಒಟ್ಟು | Amount Rs.5000/-each |
|---|---|---|---|---|---|
| 1 | ಬಾಗಲಕೋಟೆ | 1986 | 911 | 2897 | **14485000** |
| 2 | ಬಳ್ಳಾರಿ | 2600 | 6386 | 8986 | **44930000** |
| 3 | ಬೆಳಗಾವಿ | 4626 | 2413 | 7039 | **35195000** |
| 4 | ಬೆಂಗಳೂರು ಗ್ರಾಮಾಂತರ | 1148 | 1077 | 2225 | **11125000** |
| 5 | ಬೆಂಗಳೂರು ನಗರ | 5135 | 5071 | 10206 | **51030000** |
| 6 | ಬೀದರ್ | 1461 | 1290 | 2751 | **13755000** |
| 7 | ಚಾಮರಾಜನಗರ | 841 | 2669 | 3510 | **17550000** |
| 8 | ಚಿಕ್ಕಬಳ್ಳಾಪುರ | 1834 | 2560 | 4394 | **21970000** |
| 9 | ಚಿಕ್ಕಮಗಳೂರು | 830 | 464 | 1294 | **6470000** |
| 10 | ಚಿತ್ರದುರ್ಗ | 1479 | 3136 | 4615 | **23075000** |
| 11 | ದಕ್ಷಿಣ ಕನ್ನಡ | 880 | 299 | 1179 | **5895000** |
| 12 | ದಾವಣಗೆರೆ | 1438 | 2200 | 3638 | **18190000** |
| 13 | ಧಾರವಾಡ | 1904 | 1910 | 3814 | **19070000** |
| 14 | ಗದಗ | 1587 | 1131 | 2718 | **13590000** |
| 15 | ಹಾಸನ | 1496 | 1735 | 3231 | **16155000** |
| 16 | ಹಾವೇರಿ | 1716 | 2048 | 3764 | **18820000** |
| 17 | ಕಲಬುರ್ಗಿ | 3056 | 1922 | 4978 | **24890000** |
| 18 | ಕೊಡಗು | 350 | 207 | 557 | **2785000** |
| 19 | ಕೋಲಾರ | 2025 | 2031 | 4056 | **20280000** |
| 20 | ಕೊಪ್ಪಳ | 1927 | 2027 | 3954 | **19770000** |
| 21 | ಮಂಡ್ಯ | 1995 | 3670 | 5665 | **28325000** |
| 22 | ಮೈಸೂರು | 2877 | 4523 | 7400 | **37000000** |
| 23 | ರಾಯಚೂರು | 2247 | 4832 | 7079 | **35395000** |
| 24 | ರಾಮನಗರ | 906 | 1159 | 2065 | **10325000** |
| 25 | ಶಿವಮೊಗ್ಗ | 1346 | 707 | 2053 | **10265000** |
| 26 | ತುಮಕೂರು | 2183 | 4032 | 6215 | **31075000** |
| 27 | ಉಡುಪಿ | 933 | 278 | 1211 | **6055000** |
| 28 | ಉತ್ತರ ಕನ್ನಡ | 845 | 605 | 1450 | **7250000** |
| 29 | ವಿಯಜಪುರ | 2569 | 1187 | 3756 | **18780000** |
| 30 | ಯಾದಗಿರಿ | 1246 | 1696 | 2942 | **14710000** |
| | ಒಟ್ಟು | **55466** | **64176** | **119642** | **598210000** |

## ಅನುಬಂಧ-2

### ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ

ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯಿಂದ ನೋಂದಾಯಿತ ಕಟ್ಟಡ ಕಾರ್ಮಿಕರಿಗೆ ಕೋವಿಡ್-19 ಹಿನ್ನಲೆಯಲ್ಲಿ ರೂ.5000/- ಗಳ ಸಹಾಯಧನವನ್ನು ಪಾವತಿಸಿರುವ ಜಿಲ್ಲಾವಾರು ವಿವರ

| ಕ್ರ.ಸಂ | ಜಿಲ್ಲೆ | ಮಂಡಳಿಯಿಂದ ಡಿಬಿಟಿ ಆಧಾರ್ ಮೂಲಕ ಪಾವತಿಸಿದ ಕಾರ್ಮಿಕರ ಸಂಖ್ಯೆ | ಮಂಡಳಿಯಿಂದ ಎನ್‌ಇಎಫ್‌ಟಿ ಮೂಲಕ ಪಾವತಿಸಿದ ಕಾರ್ಮಿಕರ ಸಂಖ್ಯೆ | ಕಾರ್ಮಿಕ ಅಧಿಕಾರಿಗಳಿಂದ ಪಾವತಿ ಮಾಡಲಾದ ಕಾರ್ಮಿಕರ ಸಂಖ್ಯೆ |
|---|---|---|---|---|
| 1 | ಬಾಗಲಕೋಟೆ | 15579 | 3393 | 10555 |
| 2 | ಬೆಳಗಾವಿ | 41674 | 11281 | 17026 |
| 3 | ಬಳ್ಳಾರಿ | 45372 | 4036 | 33433 |
| 4 | ಬೆಂಗಳೂರು | 36357 | 5378 | 42032 |
| 5 | ಬೀದರ್ | 43651 | 5117 | 22846 |
| 6 | ಬಿಜಾಪುರ | 17613 | 3773 | 24239 |
| 7 | ಚಾಮರಾಜನಗರ | 40290 | 1117 | 13252 |
| 8 | ಚಿಕ್ಕಬಳ್ಳಾಪುರ | 15980 | 1031 | 6735 |
| 9 | ಚಿಕ್ಕಮಗಳೂರು | 19550 | 9040 | 6139 |
| 10 | ಚಿತ್ರದುರ್ಗ | 60049 | 3927 | 14556 |
| 11 | ದಾವಣಗೆರೆ | 58869 | 3194 | 22245 |
| 12 | ಗದಗ | 11999 | 5102 | 6748 |
| 13 | ಹಾಸನ | 54320 | 3401 | 15182 |
| 14 | ಹಾವೇರಿ | 13247 | 11138 | 19991 |
| 15 | ಹುಬ್ಬಳ್ಳಿ | 48299 | 7813 | 20973 |
| 16 | ಕಲಬುರಗಿ | 40707 | 6335 | 37875 |
| 17 | ಕಾರವಾರ | 47485 | 13792 | 17664 |
| 18 | ಕೋಲಾರ | 44575 | 726 | 21288 |
| 19 | ಕೊಪ್ಪಳ | 65794 | 5757 | 5348 |
| 20 | ಮಡಿಕೇರಿ | 951 | 468 | 1443 |
| 21 | ಮಂಡ್ಯ | 24824 | 1643 | 14622 |
| 22 | ಮಂಗಳೂರು | 35657 | 7593 | 13132 |
| 23 | ಮೈಸೂರು | 34030 | 2852 | 28120 |
| 24 | ರಾಯಚೂರು | 38789 | 2080 | 13279 |
| 25 | ರಾಮನಗರ | 9638 | 1059 | 18393 |
| 26 | ಶಿವಮೊಗ್ಗ | 92815 | 7055 | 13569 |
| 27 | ತುಮಕೂರು | 23338 | 2317 | 15527 |
| 28 | ಉಡುಪಿ | 17430 | 7409 | 7759 |
| 29 | ಯಾದಗಿರಿ | 15774 | 4269 | 7708 |
| | ಒಟ್ಟು | 10,14,656 | 142096 | 491679 |
| | ಒಟ್ಟು | 16,48,431 | | |
| | ಪಾವತಿಸಲಾಗಿರುವ ಒಟ್ಟು ಮೊತ್ತ | 824,21,55,000 | | |